ಶ್ರೀ ಜಿ. ಎಸ್. ಶಿವಸಂಜಪ್ಪ.—ಸ್ವಾಮಿ, ಇದರಲ್ಲಿ ನನಗೆ ಬಂದಿರತಕ್ಕ ಅನುಮಾನ ಎಂದರೆ ೧೯೮೪ನೇ ಇಸವಿಯಿಂದ ಇದುವರೆಗೂ ತನಿಖೆಯಾಗುತ್ತಿದೆ ಎಂದರೆ, ಕಾರಣವೇನು ? ಸಾಕ್ಷಿಗಳು ಬರಲಿಲ್ಲವೆ ? ಅಥವಾ ಅವರು ಎಲ್ಲಾದರೂ ತಪ್ಪಿಸಿಕೊಂಡು ಹೋಗಿದ್ದಾರೆಯೆ ? ಯಾವ ಕಾರಣಕ್ಕಾಗಿ ವರದಿ ನಿಧಾನವಾಯಿತು ಎನ್ನುವ ಬಗ್ಗೆ ವರದಿಯಾದರೂ ನಿಮ್ಮ ಹತ್ತಿರ ಇರಬೇಕಲ್ಲಾ. ಈ ಕೊಲೆಯ ವಿಚಾರದಲ್ಲಿ ದೊಡ್ಡ ದೊಡ್ಡ ಭಿತ್ತಿ ಪತ್ರಗಳನು ಪ್ರಿಂಟ್ ಮಾಡಿಸಿ ಹಂಚಿದ್ದಾರೆ, ಜೊತೆಗೆ ನೂರಾರು ಆರ್ಜಿಗಳನ್ನೂ ಕೂಡ ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಟ್ಟಿದ್ದಾರೆ. ಅಲ್ಲದೆ ತಮಗೂ ಕೂಡ ಪತ್ರವನ್ನು ಬರೆದಿದ್ದಾರೆ. ಇದರ ಬಗ್ಗೆ ತಾವು ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಬಿ. ರಾಚಯ್ಯ.—ತಮ್ಮ ಹತ್ತಿರ ಹೆಚ್ಚಿನ ಮಾಹಿತಿಗಳೇನಾದರೂ ಇದ್ದರೆ ಅವುಗಳನ್ನು ನನ್ನ ಕಡೆಗೆ ಕಳುಹಿಸಿಕೊಟ್ಟರೆ ಈ ಕೊಲೆ ಪ್ರಕರಣವನ್ನು ಸುಲಭವಾಗಿ ಪತ್ತೆ ಹೆಚ್ಚುವುದಕ್ಕೆ ಅನುಕೂಲವಾಗುತ್ತದೆ.

೧೮೪. ಮಾನ್ಯ ಸದಸ್ಯರು ಹಾಜರಿಲ್ಲ.

ಶ್ರೀ ರೇಣುಕಾ ಯಲ್ಲಮ್ಮನ ಕ್ಷೇತ್ರವನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುವುದು

೧೮೫. ಶ್ರೀ ಚಂದ್ರಶೇಖರ್ ಮಾಮನಿ (ಧಾರವಾಡ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ವಾರ್ತಾ, ಯುವಜನ ಸೇವೆ, ಕ್ರೀಡೆ ಹಾಗೂ ಪ್ರವಾಸೋದ್ಯಮ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಸವದತ್ತಿಯ ಶ್ರೀ ರೇಣುಕಾ ಎಲ್ಲಮ್ಮನ ಕ್ಷೇತ್ರ, ಮಲಪ್ರಭಾ ಆಣೆಕಟ್ಟು ಪ್ರದೇಶ ಹಾಗೂ ಸೊಗಲ ಕ್ಷೇತ್ರವನ್ನು ಪ್ರವಾಸಿ ಕೇಂದ್ರಗಳನ್ನಾಗಿ ಅಭಿವೃದ್ಧಿ ಪಡಿಸಲು ಸರ್ಕಾರದವರು ಸೂಕ್ತ ಕ್ರಮ ಕೈಗೊಳ್ಳುವರೇ ?

ಶ್ರೀ ಜೀವರಾಜ ಆಳ್ವ.—(ಮಾನ್ಯ ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆ ಮತ್ತು ಕನ್ನಡ ಸಂಸ್ಕೃತಿ ಹಾಗೂ ರಾಜ್ಯ ಸಚಿವರು).—

ಸೌಂದತ್ತಿಯ ಶ್ರೀ ರೇಣುಕಾ ಎಲ್ಲಮ್ಮ ಮತ್ತು ಸೊಗಲ ಕ್ಷೇತ್ರವು ದಾರ್ಮಿಕದತ್ತಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಮಲಪ್ರಭಾ ಜಲಾಶಯದಲ್ಲಿ ದೋಣಿ ವಿಹಾರವನ್ನು ಒದಗಿಸುವ ಯೋಜನೆಯನ್ನು ಪ್ರವಾಸೋದ್ಯಮ ಇಲಾಖೆಯು ನಿರೂಪಿಸುತ್ತಿದೆ.

ಶ್ರೀ ಚಂದ್ರಶೇಖರ ಮಾಮನಿ.—ಸ್ವಾಮಿ, ಶ್ರೀರೇಣುಕಾ ಎಲ್ಲಮ್ಮ ಮತ್ತು ಸೋಗಲ ಕ್ಷೇತ್ರಗಳು ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುತ್ತವೆಂದು ತಾವು ಹೇಳಿದಿರಿ. ಆದರೆ ನನ್ನ ಪ್ರಶ್ನೆ ಏನೆಂದರೆ, ಈ ಕ್ಷೇತ್ರಗಳನ್ನು ಪ್ರವಾಸೀ ಕೇಂದ್ರಗಳನ್ನಾಗಿ ಮಾಡುತ್ತೀರಾ ?

ಶ್ರೀ ಜೀವರಾಜ ಆಳ್ವ.—ಸೌಂದತ್ತಿ ಮತ್ತು ರೇಣುಕ ಎಲ್ಲಮ್ಮ ಕ್ಷೇತ್ರಗಳನ್ನು ಪ್ರವಾಸೀ ಕೇಂದ್ರಗಳನ್ನಾಗಿ ಮಾಡಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದ್ದೇವೆ. ಇದರ ಜೊತೆಗೆ ಅಲ್ಲಿಗೆ ನೀರಿನ ಸೌಲಭ್ಯವನ್ನು ಒದಗಿಸಿಕೊಡುವಂತೆ ಅಲ್ಲಿನ ಜಿಲ್ಲಾಧಿಕಾರಿಯವರನ್ನು ಕೇಳಿದ್ದೇವೆ. ಮತ್ತು ಪ್ರವಾಸಿಗರಿಗೋಸ್ಕರ ಮಾರ್ಗದರ್ಶಕ ಸಿಬ್ಬಂದಿಯನ್ನೂ ಕೂಡ ನೇಮಕ ಮಾಡಿದ್ದೇವೆ.

ಶ್ರೀ ಚಂದ್ರಶೇಖರ ಮಾಮನಿ.—ಈ ಕೆಲಸವನ್ನು ಯಾವಾಗ ಮಾಡುತ್ತೀರಿ ?

ಶ್ರೀ ಜೀವರಾಜ ಆಳ್ವ.—ಸರ್ಕಾರಕ್ಕೆ ಸ್ವಲ್ಪ ಆರ್ಥಿಕ ಮುಗ್ಗಟ್ಟು ಇರುವುದರಿಂದ ಇದನ್ನು ನೋಡಿಕೊಂಡು ಮುಂದಿನ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಕೆ. ಹೆಚ್. ಪಾಟೀಲ್.—ಸ್ವಾಮಿ, ಎಲ್ಲಮ್ಮನ ಕ್ಷೇತ್ರದಲ್ಲಿ ಬಹಳಷ್ಟು ಹಣ ಇದೆ. ಅದನ್ನು ತಾವೇ ತೆಗೆದುಕೊಂಡು ಎಲ್ಲ ಸೌಲಭ್ಯಗಳನ್ನೂ ಒದಗಿಸಿಕೊಟ್ಟರೆ ಯಾವ ಅಭ್ಯಂತರವೂ ಇಲ್ಲ. ಇದನ್ನು ಯೋಚನೆ ಮಾಡುತ್ತೀರಾ ?

ಶ್ರೀ ಜೀವರಾಜ ಆಳ್ವ.—ತಮ್ಮ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ.

ಶ್ರೀ ಚಂದ್ರಶೇಖರ್ ಮಾಮನಿ.—ಬ್ಯಂದಾವಸ ಮಾದರಿಯಲ್ಲಿ ಅಭಿವೃದ್ಧಿ ಮಾಡಲು ಸಾಧ್ಯವೇ?

ಶ್ರೀ ಜೀವರಾಜ ಆಳ್ವ —ನಾನು ಈಗಾಗಲೇ ತಿಳಿಸಿದಂತೆ ರಾಜ್ಯ ಸರ್ಕಾರ ಆರ್ಥಿಕ ಮಂಗಟ್ಟಿನಲ್ಲಿದೆ. ಮಾನ್ಯ ಸದಸ್ಯರಾದ ಕೆ ಹೆಚ್. ಪಾಟೀಲರು ಕೊಟ್ಟ ಸಲಹೆಯನ್ನೂ ಗಮನದಲ್ಲಿಟ್ಟುಕೊಂಡು ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ. ಮತ್ತು ಕೇಂದ್ರ ಸರ್ಕಾರದ ಯೋಜನೆಯ ಪ್ರಕಾರ ಪುನರ್ವಸಿಗಳಿಗೆ ಆದಷ್ಟೂ ಎಲ್ಲ ಸೌಲಭ್ಯಗಳನ್ನು ಒದಗಿಸಲು ಪ್ರಯತ್ನ ಮಾಡುತ್ತೇವೆ.

ಉನ್ನತ ವ್ಯಾಸಂಗಕ್ಕಾಗಿ ವೈದರ ಸಲಹೆ

೪೭೬. ಶ್ರೀ ಸಿ. ಪಿ. ಮೂಡಲಗಿರಿಯಪ್ಪ (ಶಿರಾ).-- ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

(ಅ) ರಾಜ್ಯ ಸರ್ಕಾರದ ಸೇವೆಯಲ್ಲಿದ್ದು ದೇಶದ ಮತ್ತು ವಿದೇಶಗಳಲ್ಲಿ ಉನ್ನತ ವ್ಯಾಸಂಗಕ್ಕೆ ಹೋಗಿರುವ ವೈದ್ಯರ ಸಂಖ್ಯೆ ಎಷ್ಟು ?

(ಆ) ಈ ಉನ್ನತ ವ್ಯಾಸಂಗಕ್ಕೆ ಹೋದುದರಿಂದ ಖಾಲಿ ಬಿದ್ದ ವೈದ್ಯರ ಹುದ್ದೆಗಳಿಂದಾಗಿ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

(ಇ) ಹಾಗಿದ್ದಲ್ಲಿ ಖಾಲಿಬಿದ್ದ ಸ್ಥಳಗಳಿಗೆ ಗಣತಿಗೆ ಆಧಾರದ ಮೇಲೆ ವೈದ್ಯರನ್ನು ನೆ ಮಿಸಲಾಗುವುದೇ ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮಂತ್ರಿಗಳು.--

		ರಾಜ್ಯದಲ್ಲಿ	ರಾಜ್ಯದ ದೇಶದ ಹೊರಗೆ
(ಅ)	ವರ್ಗ		
	(೧)	ಉಪನ್ಯಾಸಕರು ೪೪	೩
	(೨)	ಸಹಾಯಕ ವೈದ್ಯರು ೨೭೬	? —

(ಆ) ಕೆಲಮಟ್ಟಿಗೆ ತೊಂದರೆಯಾದಂದು ಸರ್ಕಾರದ ಗಮನಕ್ಕೆ ಬಂದಿದೆ.

(ಇ) ಇಲ್ಲ

ಶ್ರೀ ಸಿ. ಪಿ. ಮೂಡಲಗಿರಿಯಪ್ಪ –ಸಾರ್ವಜನಿಕರಿಗೆ ತೊಂದರೆಯಾಗದ ರೀತಿಯಲ್ಲಿ ವೈದ್ಯರುಗಳನ್ನು ನೇಮಕ ಮಾಡಲು ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಲೋಕಸೇವಾ ಆಯೋಗದಿಂದ ಅಭ್ಯರ್ಥಿಗಳು ಬರುವವರೆಗೂ ಸಾರ್ವಜನಿಕರಿಗೆ ತೊಂದರೆಯಾಗದಿರುವಂತೆ ನಿವೃತ್ತರಾದವರನ್ನೇ ಮತ್ತೆಕೆಲವು ದಿವಸದಮಟ್ಟಿಗೆ ನೇಮಕ ಮಾಡಿಕೊಳ್ಳುವುದನ್ನು ಪರಿಶೀಲಿಸುತ್ತಿದ್ದೇವೆ.

ಶ್ರೀ ಸಿ. ಪಿ. ಮೂಡಲಗಿರಿಯಪ್ಪ.— ಅನಧಿಕೃತ ಗೈರುಹಾಜರಿಯಾಗಿ ಹೊರ ದೇಶಕ್ಕೆ ಹೋಗಿರುವವರನ್ನು on leave ಎಂದು ಮಾಡುತ್ತಿದ್ದಾರೆ. ಇದರಿಂದಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದಂದರಿಂದ ಆ ಹುದ್ದೆಗಳನ್ನು ಏತಕ್ಕೆ ಭರ್ತಿ ಮಾಡಿಲ್ಲ ?

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಯಾರ್ಯಾರು ಅನಧಿಕೃತವಾಗಿ ಗೈರು ಹಾಜರಾಗಿದ್ದಾರೆ ಎಂಬ ಮಾಹಿತಿ ನನ್ನಲ್ಲಿಲ್ಲ. ಆ ಮಾಹಿತಿಯನ್ನು ತರಿಸಿ ನೋಡುತ್ತೇನೆ.

ಶ್ರೀ ಸಿ. ಪಿ. ಮೂಡಲಗಿರಿಯಪ್ಪ.—ಕೆಲವು ಆಸ್ಪತ್ರೆಗಳಲ್ಲಿ, ಪಿ.ಹೆಚ್.ಸಿ.ಗಳಲ್ಲಿ ವೈದ್ಯರು ಇಲ್ಲದೇ ಇರುವುದರಿಂದ ಅಲ್ಲಿರತಕ್ಕ ಸಿಬ್ಬಂದಿ ವರ್ಗಕ್ಕೆ ಏನೂ ಕೆಲಸವೇ ಇಲ್ಲದೆ ಅವರ ಸಂಬಳಕ್ಕಾಗಿ ಕೊಡುತ್ತಿರುವ ಹಣ ವೃಥಾ ಅಪವ್ಯಯವಾಗುತ್ತಿಲ್ಲವೆ ? ಇದರ ಬಗ್ಗೆ ಏನು ಕ್ರಮ ತಗೆದುಕೊಳ್ಳುತ್ತೀರಿ ?

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಅನಿವಾರ್ಯವಾಗಿ ಕೆಲವು ಕಡೆ ಈರೀತಿ ಆಗುತ್ತಿದೆ. ಆದಷ್ಟು ಬೇಗ ಇದನ್ನು ಸರಿಪಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಮತ್ತು ರೋಗಿಗಳಿಗೆ ತೊಂದರೆಯಾಗದಿರಲು ನಿವೃತ್ತರಾದವರನ್ನೇ ಮತ್ತೆ ನೇಮಕಾತಿ ಮಾಡಿಕೊಳ್ಳಲು ಯೋಚನೆ ಮಾಡುತ್ತಿದ್ದೇವೆ. ಅಲ್ಲದೆ ಹೆಚ್ಚು ಜನ ವೈದ್ಯರು ಇರತಕ್ಕ ಕಡೆಯಿಂದ ವೈದ್ಯರೇ ಇಲ್ಲದಿರುವ ಕಡೆಗಳಿಗೆ ಒಬ್ಬಬ್ಬರನ್ನು ವರ್ಗ ಮಾಡಬೇಕೆಂದು ಈಗಾಗಲೇ ಸಂಬಂಧಪಟ್ಟವರಿಗೆ ಹೇಳಿದ್ದೇವೆ.